# ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಡಾಧಿಕಾರಿಗಳ ನ್ಯಾಯಾಲಯ
# ಹೂವಿನಹಡಗಲಿ
## ಅಸಲು ದಾವೆ ನಂ ಃ 166/2015

**ಪಿಡಬ್ಲ್ಯೂ ಃ 01**

ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕ ಃ 28-08-2018 ರಂದು ಸತ್ಯ ಪ್ರತಿಜ್ಞೆಯನ್ನು ಬೋಧಿಸಲಾಯಿತು.

ಪಾಟಿ ಸವಾಲು ಃ ಪ್ರತಿವಾದಿ ಪರ ಶ್ರೀ ಎಸ್ ಎಸ್ ಬಿ ವಕೀಲರಿಂದ ಃ

ನಾನು 6 ನೇ ತರಗತಿ ಪಾಸ್ ಆಗಿ 07 ನೇ ತರಗತಿಗೆ ನನ್ನ ವಿದ್ಯಾಭ್ಯಾಸ ಬಿಟ್ಟಿರುತ್ತೇನೆ. ನನಗೆ ಓದಲು ಬರೆಯಲು ಜ್ಞಾನ ಚೆನ್ನಾಗಿ ಇರುತ್ತದೆ. ಅದೇರೀತಿ ನನ್ನ ತಮ್ಮಂದಿರು ಸಹ ಚೆನ್ನಾಗಿ ವಿದ್ಯಾಭ್ಯಾಸ ಮಾಡಿರುತ್ತಾರೆ. ಓಲಿ ಮನೆತನದ ಮೂಲ ಪುರುಷ ನನ್ನ ತಂದೆ ಸಿದ್ದಪ್ಪ ಅಷ್ಟೆ ನನಗೆ ಗೊತ್ತು. ಸಿದ್ದಪ್ಪ ಅವರ ತಂದೆಯ ಹೆಸರು ಓಲಿ ಮುದುಕಪ್ಪ. ನನ್ನ ಅಜ್ಜ ಮುದುಕಪ್ಪನನ್ನು ನಾನು ನೋಡಿರುವುದಿಲ್ಲ. ನನ್ನ ಅಜ್ಜ ಮುದುಕಪ್ಪನಿಗೆ 03 ಜನ ಅಣ್ಣ-ತಮ್ಮಂದಿರು. ನಾನು ಮುದುಕಪ್ಪನ ಅಣ್ಣ-ತಮ್ಮಂದಿರನ್ನು ಸಹ ನೋಡಿರುವುದಿಲ್ಲ. ಮುದುಕಪ್ಪನ ಅಣ್ಣ-ತಮ್ಮಂದಿರಿಗೆ ನಮ್ಮ ಮನೆತನದ ಯಾವ್ಯಾವ ಆಸ್ತಿಗಳು ಬಂದಿರುತ್ತವೆ ಅಂತ ನನಗೆ ಗೊತ್ತಿಲ್ಲ.

02. ನನ್ನ ತಂದೆಯಾದ ಓಲಿ ಸಿದ್ದಪ್ಪನಿಗೆ ಮುದುಕಪ್ಪನಿಂದ ಯಾವ್ಯಾವ ಆಸ್ತಿಗಳು ಬಂದಿರುತ್ತವೆ ಅಂತ ಹೇಳಲು ಬರುವುದಿಲ್ಲ. ದಾವಾಆಸ್ತಿಯ ಸರ್ವೆ ನಂಬರ ಃ 83 ಎ ಅದರ ವಿಸ್ತೀರ್ಣ 03 ಎಕರೆ 71 ಸೆಂಟ್ಸ್ ಇರುತ್ತದೆ. ಅದರ ಚೆಕ್ಕುಬಂದಿ ನನಗೆ ಹೇಳಲು ಬರುತ್ತದೆ. ಪೂರ್ವಕ್ಕೆ – ಓಲಿ ಕೊಟ್ರಪ್ಪ ತಾಯಿ ದೇವಮ್ಮ ಇವರ ಜಮೀನು, ಪಶ್ಚಿಮಕ್ಕೆ - ಹಡಗಲಿ ದಾರಿ, ಉತ್ತರಕ್ಕೆ - ನಮ್ಮ ಉಳಿದ ಜಾಗ, ದಕ್ಷಿಣಕ್ಕೆ – ದಾರಿ ಇರುತ್ತದೆ. ಈ ಚೆಕ್ಕುಬಂದಿಯ ಮದ್ಯದಲ್ಲಿ 03 ಎಕರೆ 71 ಸೆಂಟ್ಸ್ ಜಮೀನು ಬರುತ್ತದೆ ಅದರಲ್ಲಿ 30 ಅಥವಾ 40 ಸೆಂಟ್ಸ್ ಕಣ ಮಾಡಿಕೊಂಡು ದನದ ಕೊಟ್ಟಿಗೆಯನ್ನು ಮಾಡಿಕೊಂಡಿರುತ್ತೇವೆ. ಈ ದಾವೆಯನ್ನು ಸಲ್ಲಿಸುವ ಪೂರ್ವದಲ್ಲಿ ಪ್ರತಿವಾದಿಗಳಿಗೆ ನೋಟಿಸನ್ನು ಕೊಟ್ಟಿರುತ್ತೀರಾ ಅಂದರೆ ನೋಟೀಸನ್ನು ನಾನು ಕೊಟ್ಟಿರುತ್ತೇನೆ. ಆ ನೋಟೀಸನ್ನು ಯಾವಾಗ ಕೊಟ್ಟಿರುತ್ತೀರಿ ಅಂದರೆ 2013-14 ಸಾಲಿನಲ್ಲಿ ಕೊಟ್ಟಿರುತ್ತೇನೆ. ಆ ನೋಟಿಸಿಗೆ ಮಾಹಿತಿಯನ್ನು ನಾನೇ ಕೊಟ್ಟಿರುತ್ತೇನೆ. ಆ ನೋಟಿಸಿನಲ್ಲಿ ದಾವಾಆಸ್ತಿಯ

ಚೆಕ್ಕುಬಂದಿ ಮತ್ತು ವಿಸ್ತೀರ್ಣ ಹಾಗೂ ಸರ್ವೆ ನಂಬರನ್ನು ಬರೆಸಿಕೊಟ್ಟಿರುತ್ತೇನೆ. ಆ ನೋಟಿಸಿನಲ್ಲಿ ಚೆಕ್ಕುಬಂದಿ ಬೇರೆಯಾಗಿರುತ್ತದೆ. (ಸಾಕ್ಷಿಯು ಮುಂದುವರೆದು 40 ಸೆಂಟ್ಸಗೆ ಬೇರೆಯಾಗಿರುತ್ತದೆ.)

03. ಈ ದಾವಾಆಸ್ತಿಯ ಸರ್ವೆ ನಂಬರ ಯಾವ ಪ್ರಕಾರವಾಗಿ ನಿಮ್ಮ ತಂದೆಗೆ ಬಂದಿರುತ್ತದೆ ಎಂದು ನೋಟಿಸನಲ್ಲಿ ಹೇಳಿರುತ್ತೀರಾ ಅಂದರೆ ನನ್ನ ತಂದೆಯು ಕೊಂಡುಕೊಂಡಂತ ಆಸ್ತಿಯಾಗಿರುತ್ತದೆ ಅದನ್ನು ನೋಟಿಸಿನಲ್ಲಿ ಹೇಳಿರುತ್ತೀರಾ ಅಂದರೆ ನನ್ನ ತಂದೆಯ ಆಸ್ತಿ ಎಂದು ನಾನು ಹೇಳಿರುತ್ತೇನೆ. ನೋಟಿಸನಲ್ಲಿ ನಿಮ್ಮ ತಂದೆಯ ಆಸ್ತಿ ಹೇಗೆ ಬಂದಿರುತ್ತದೆ ಎಂದು ಬರೆದು ಕಳುಹಿಸಿರುತ್ತೀರಾ ಎಂದು ಪುನಃ ಕೇಳಿದಾಗ ನಾನು ಆ ರೀತಿಯಾಗಿ ಬರೆಸಿಕೊಟ್ಟಿಲ್ಲ. ಅದೇರೀತಿ ಈ ಆಸ್ತಿಯು ಯಾರಿಂದ ಹೇಗೆ ಬಂತು ಎಂದು ನಿಮಗೆ ಗೊತ್ತಿಲ್ಲವೆಂದರೆ ನನಗೆ ಏನು ಗೊತ್ತಿಲ್ಲ.

04. ದಾವಾಪತ್ರವನ್ನು ತಯಾರಿಸಲು ನಾನೇ ಮಾಹಿತಿಯನ್ನು ಕೊಟ್ಟಿರುತ್ತೇನೆ. ದಾವಾಪತ್ರದಲ್ಲಿ ಯಾವ್ಯಾವ ವಿಷಯಗಳು ಇದ್ದು ಏನೇನು ಮಾಹಿತಿ ಮತ್ತು ಪ್ರಾರ್ಥನೆಯನ್ನು ಕೇಳಿರುತ್ತೀರಿ ಎಂದು ನಿಮಗೆ ಗೊತ್ತಿರುತ್ತದೆಯೇ ಅಂದರೆ ಇಲ್ಲ. ನನ್ನ ತಂದೆ ಯಾವಾಗ ತೀರಿಕೊಂಡಿರುತ್ತಾರೆ ಎಂದು ನನ್ನ ವಾದಪತ್ರದಲ್ಲಿ ಬರೆಸಿರುವುದಿಲ್ಲ. ನನ್ನ ತಂದೆ 1999 ನೇ ಸಾಲಿನಲ್ಲಿ ತೀರಿಕೊಂಡಿರುತ್ತಾರೆ. ನನ್ನ ತಾಯಿಯ ಹೆಸರು ಗಂಗಮ್ಮ ಅವರು 2004 ರಲ್ಲಿ ತೀರಿಕೊಂಡಿರುತ್ತಾರೆ. ಈ ವಿಷಯವನ್ನು ನನ್ನ ವಾದಪತ್ರದಲ್ಲಿ ಹೇಳಿ ಬರೆಸಿರುವುದಿಲ್ಲ.

05. ನನ್ನ ತಂದೆ ತಾಯಿಗೆ ನಾವು ಮೂವರು ಗಂಡುಮಕ್ಕಳು ಮತ್ತು ಇಬ್ಬರು ಹೆಣ್ಣುಮಕ್ಕಳು. ಅವರುಗಳು ಓಲಿ ಮುದುಕಪ್ಪ, ಓಲಿ ವಿರುಪಾಕ್ಷಪ್ಪ ಮತ್ತು ಓಲಿ ಮಹೇಶ್ವರಪ್ಪ ಮತ್ತು ಫಕೀರಮ್ಮ ಹಾಗೂ ಬಸಮ್ಮ. ಫಕೀರಮ್ಮ ಮತ್ತು ಬಸಮ್ಮಳನ್ನು ಈ ದಾವೆಯಲ್ಲಿ ಪಕ್ಷಕಾರರನ್ನಾಗಿ ಸೇರಿಸಿಲ್ಲ ಅವರನ್ನು ಈ ದಾವೆಯಲ್ಲಿ ಪಕ್ಷಕಾರರನ್ನಾಗಿ ಸೇರಿಸಲು ನನಗೆ ಯಾವುದೇ ತೊಂದರೆ ಇರಲಿಲ್ಲ. ನಾನು ಸುಳ್ಳು ವಂಶವೃಕ್ಷವನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿರುತ್ತೇನೆ ಅಂದರೆ ಸರಿಯಲ್ಲ. ನಾವು ಹೆಣ್ಣುಮಕ್ಕಳನ್ನು ಬಿಟ್ಟು ಗಂಡುಮಕ್ಕಳ ಹೆಸರನ್ನು ಮಾತ್ರ ಸೇರಿಸಿರುತ್ತೇನೆ. ನಾನು ನನ್ನ ಅನುಕೂಲಕ್ಕೆ ತಕ್ಕಂತೆ ವಂಶವೃಕ್ಷವನ್ನು ಸೃಷ್ಠಿ ಮಾಡಿರುತ್ತೇನೆ ಅಂದರೆ ಸರಿಯಲ್ಲ. ನನ್ನ ತಂದೆಯ ಮರಣಪ್ರಮಾಣಪತ್ರವನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ.

06. ಅದೇರೀತಿ ನಿಮಗೆ ಪಿತ್ರಾರ್ಜಿತವಾಗಿ ಬಂದಂತಹ ಆಸ್ತಿಗಳು ಯಾವವು ಅಂದರೆ ನನಗೆ ಗೊತ್ತಾಗುವುದಿಲ್ಲ. ನನ್ನ ತಂದೆಯಿಂದ ನಮಗೆ ಒಟ್ಟಾರೆಯಾಗಿ 15 ಎಕರೆ ಆಸ್ತಿ ಬಂದಿರುತ್ತದೆ. ನನ್ನ ತಂದೆ ತೀರಿಕೊಂಡನಂತರ ಅಂದರೆ ನನ್ನ ತಾಯಿಯು 2004 ನೇ ಸಾಲಿನಲ್ಲಿ ತೀರಿಕೊಂಡಿದ್ದು ನಂತರದಲ್ಲಿ ನಾವುಗಳು ಪಾಲುವಿಭಾಗ ಮಾಡಿಕೊಂಡಿರುತ್ತೇವೆ. ಆ ಪಾಲುವಿಭಾಗದ ಪ್ರಕಾರವಾಗಿ ಯಾರ್‍ಯಾರಿಗೆ ಎಷ್ಟೇಷ್ಟು ಬಂದಿರುತ್ತದೆ ಇನ್ನು ಹಿಸ್ಸೆಯಾಗಿರುವುದಿಲ್ಲ ಎರಡೆರಡು ಎಕರೆ, ಮೂರುಮೂರು ಎಕರೆ, ನಾಲ್ಕು ನಾಲ್ಕು ಎಕರೆ ಜಮೀನುಗಳಲ್ಲಿ ಹಿಸ್ಸೆಯಾಗಿರುತ್ತದೆ. ಇನ್ನು ಕೂಡ ಮೂವರ ಹೆಸರಿನಲ್ಲಿ ಮ್ಯುಟೇಶನ ಜಂಟಿಯಾಗಿರುತ್ತದೆ. ಒಟ್ಟಾರೆಯಾಗಿ 15 ಎಕರೆ ಚಿಲ್ಲರೆ ಆಸ್ತಿಯು ಮೂವರ ಹೆಸರಿನಲ್ಲಿ ಜಂಟಿಯಾಗಿರುತ್ತದೆ. ನಾನು ಒಂದು ಆಸ್ತಿಯನ್ನು ಕೊಂಡುಕೊಂಡಿದ್ದು ಅದು 03 ಎಕರೆ 95 ಸೆಂಟ್ಸು ಇರುತ್ತದೆ ಆ ಒಂದು ಆಸ್ತಿಯ ಖಾತೆಯು ಮಾತ್ರ ನನ್ನ ಹೆಸರಿನಲ್ಲಿ ಇರುತ್ತದೆ ಅದು ಇನ್ನು ಪಾಲು ಆಗಿರುವುದಿಲ್ಲ.

(ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟಿ ಸವಾಲಿಗೆ ಸಮಯ ಕೋರಿದ್ದರಿಂದ ಅನುಮತಿಯ ಮೇರೆಗೆ ಕಾಲವಕಾಶವನ್ನು ನೀಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ,

ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು, ಹೂವಿನಹಡಗಲಿ.